KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೩, ೨೦೦೯ (ಭಾದ್ರಪದ ೧೨, ಶಕ ವರ್ಷ ೧೯೩೧)	ಸಂಚಿಕೆ ೩೬

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಲ್.ಎ.ಕ್ಯೂ.ಎಸ್.ಆರ್. 25/09-10, ದಿನಾಂಕ: 7ನೇ ಜುಲೈ 2009

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್‌ಎಕ್ಯೂ:ಎಸ್‌ಆರ್/29/2007–08, ದಿನಾಂಕ: 16.10.2007 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯ ದಿನಾಂಕ: 22.11.2007ರ ಕರ್ನಾಟಕ ರಾಜ್ಯ ಪತ್ರದ ಪುಟ ಸಂ. 1038 ರಿಂದ 1042 ರವರೆಗೆ ಭಾಗ–6ರಲ್ಲಿ ಹುಲಿಪುರ, ಕಂಚಗಾಲಪುರ, ಮಧುರೆಕಾವಲ್ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂ ಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮಗಳ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರುಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂ ಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಹಾಗೂ ನಾಲೆ ಹೋಗದಿರುವುದರಿಂದಾಗಿ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದು, ವಿಸ್ತೀರ್ಣವನ್ನು ಹಾಗೂ ಭೂ ಸ್ವಾಧೀನಕ್ಕೆ ಪಡದ ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು | **ಹೋಬಳಿ:** ಯಡಿಯೂರು

ತಾಲ್ಲೂಕು: ಕುಣಿಗಲ್ | **ಗ್ರಾಮ:** ಹುಲಿಪುರ, ಕಂಚಗಾಲಪುರ, ಮಧುರೆಕಾವಲ್

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ	ಷರಾ
		1) ಹುಲಿಪುರ			
1	5	ಮುದ್ದೇಗೌಡ ಬಿನ್ ಚನ್ನಯ್ಯ	55/22	0–02	ಕಡಿಮೆಯಾಗಿದೆ

ಕ್ರ. ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ. ನಂ.	ಭೂ ಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ	ಷರಾ
2	17	ಚಾಮುಂಡಮ್ಮ ಕೋಂ ಲಿಂಗಯ್ಯ, ಗಂಗೇಗೌಡ ಬಿನ್ ಚನ್ನೇಗೌಡ, ನರಸಿಂಹಯ್ಯ ಬಿನ್ ನರಸಿಂಹಯ್ಯ, ಗಂಗಯ್ಯ ಬಿನ್ ಗಂಗೇಗೌಡ, ಲಿಂಗಯ್ಯ ಬಿನ್ ಬೋರೇಗೌಡ, ಸಿದ್ದಯ್ಯ ಬಿನ್ ಬೋರಯ್ಯ, ವೆಂಕಟರಮಣಯ್ಯ ಬಿನ್ ಸಣ್ಣಯ್ಯ, ಮೂಡ್ಲಯ್ಯ ಬಿನ್ ಸಣ್ಣಯ್ಯ, ಮೂಡ್ಲಗಿರಿ ಉ. ಬುಡ್ಡಯ್ಯ ಬಿನ್ ಸಣ್ಣಯ್ಯ, ಗಂಗರಾಮಯ್ಯ ಬಿನ್ ಸಣ್ಣಯ್ಯ, ಗಿರಿಗೌಡ ಬಿನ್ ಸಣ್ಣಯ್ಯ, ಸಣ್ಣಯ್ಯ ಬಿನ್ ಹೊರಹಟ್ಟಿಗಿರಿಗೌಡ	65	0–02	ಕಡಿಮೆಯಾಗಿದೆ
3	24	ಶಿವಲಿಂಗಯ್ಯ ಬಿನ್ ಲೇಟ್ ಗಂಗಯ್ಯ	68	0–02 1/2	ಕಡಿಮೆಯಾಗಿದೆ
4	27	ಸಣ್ಣಯ್ಯನ ಲಿಂಗಯ್ಯ ಬಿನ್ ಲಿಂಗಯ್ಯ, ದಾಸಶೆಟ್ಟಿ ಬಿನ್ ವೆಂಕಟರಮಣಶೆಟ್ಟಿ, ತಿಮ್ಮಶೆಟ್ಟಿ ಬಿನ್ ವೆಂಕಟರಮಣಶೆಟ್ಟಿ, ಗೋವಿಂದಯ್ಯ ಬಿನ್ ವೆಂಕಟರಮಣಶೆಟ್ಟಿ	72/1	0–04 1/2	ಕಡಿಮೆಯಾಗಿದೆ
5	28	ಬೋರಮ್ಮ ಕೋಂ ಲಿಂಗಯ್ಯ, ದೇವೀರಮ್ಮ	71	0–08	ನಾಲೆ ಹೋಗುವುದಿಲ್ಲ
6	29	ಭೈರಯ್ಯ ಬಿನ್ ಚಿಕ್ಕಭೈರಯ್ಯ	88	0–07 1/2	ಕಡಿಮೆಯಾಗಿದೆ
		ಒಟ್ಟು		**0–26 1/2**	
		2) ಕಂಚಗಾಲಪುರ			
7	35	ಪುಟ್ಟಮಾದಮ್ಮ ಕೋಂ ಬೋರಮೇಸ್ತ್ರಿ	41/2	0–04 1/2	ಕಡಿಮೆಯಾಗಿದೆ
8	37	ಹುಚ್ಚಯ್ಯ ಬಿನ್ ಲಿಂಗಯ್ಯ, ಬಿ. ನಂಜುಂಡಯ್ಯ ಉ. ಮರಿಯಪ್ಪ ಬಿನ್ ನಂಜಪ್ಪ	44/4	0–02 1/2	ಕಡಿಮೆಯಾಗಿದೆ
9	44	ಚಿಕ್ಕಹುಚ್ಚಯ್ಯ ಬಿನ್ ಗೌಡಯ್ಯ	66/1	0–12	ನಾಲೆ ಹೋಗುವುದಿಲ್ಲ
10	45	ಮರಿಹುಚಯ್ಯ ಬಿನ್ ಲಿಂಗಯ್ಯ, ತಿಮ್ಮಮ್ಮ ಕೋಂ ಮೂಡ್ಲಗಿರಯ್ಯ, ರಂಗಯ್ಯ ಬಿನ್ ರಂಗಯ್ಯ, ಚನ್ನಯ್ಯ ಬಿನ್ ರಂಗಯ್ಯ, ವೆಂಕಟಯ್ಯ ಬಿನ್ ರಂಗಯ್ಯ, ಕೃಷ್ಣಪ್ಪ ಬಿನ್ ರಂಗಯ್ಯ, ವೆಂಕಟೇಶ ಬಿನ್ ರಂಗಯ್ಯ	67/1	0–07	ನಾಲೆ ಹೋಗುವುದಿಲ್ಲ
		ಒಟ್ಟು		**0–26**	
		3) ಮಧುರೆ ಕಾವಲ್			
11	46	ತ್ರಿವೇಣಿ ಕೋಂ ನಂಜಯ್ಯ	113	0–06	ನಾಲೆ ಹೋಗುವುದಿಲ್ಲ

ಪಿ.ಆರ್. 324 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1–20 ಎಕರೆ/ಗುಂಟೆ ಆಕಾರಕಂಡ ಬಂಜರು ಎಂಬುದಾಗಿ ವರ್ಗೀಕೃತವಾದ ಜಮೀನನ್ನು ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಕುಲ ಕಸಬು ನಡೆಸಲು ದೋಬಿಘಾಟ್ ನಿರ್ಮಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಮನವಿ ದಿನಾಂಕ:18.06.2007.
2. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ:ಸಿಆರ್:92/07–08 ದಿನಾಂಕ:04.06.2007 ಮತ್ತು 17.09.2007.
3. ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ:1397 :ಎಲ್‌ಜಿಬಿ 2007, ದಿನಾಂಕ:23.01.2008.
4. ಈ ಪ್ರಾಧಿಕಾರದ ಸಮಸಂಖ್ಯೆ ತಿಳುವಳಿಕೆ ಪತ್ರ ದಿನಾಂಕ:15.02.2008.

5. ಜಂಟಿ ಆಯುಕ್ತರು (ಆಸ್ತಿಗಳು) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ:ಎಲ್ಎಸಿ/ಪಿಆರ್:23/07–08 ದಿನಾಂಕ:25.03.2009.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿಯ ಮಡಿವಾಳ ಜನಾಂಗದವರು ತಮ್ಮ ಕುಲ ಕಸಬನ್ನು ಮಾಡಲು ನೀರಿನ ಜೊತೆ ಸೌಲಭ್ಯಗಳ ತೊಂದರೆ ಇದ್ದು, ದೋಬಿಘಾಟ್ ನಿರ್ಮಾಣಕ್ಕಾಗಿ ಬಸವನಪುರ ಗ್ರಾಮದ ಆಜುಬಾಜಿನಲ್ಲಿ ಸರ್ಕಾರಿ ಜಮೀನನ್ನು ಮಂಜೂರು ಮಾಡುವಂತೆ ಉಲ್ಲೇಖ (1)ರ ಮನವಿಯಲ್ಲಿ ಶ್ರೀ ಮಾಚಿಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು ಕೋರಿರುತ್ತಾರೆ.

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿ ಆಕಾರ ಕಂಡ ಬಂಜರು ಜಮೀನು 28–38 ಎಕರೆ/ಗುಂಟೆ ಜಮೀನಿದ್ದು, ಈ ಪೈಕಿ 4–09 ಎಕರೆ/ಗುಂಟೆ ಖರಾಬ್ ಜಮೀನಾಗಿದ್ದು, 1–20 ಎಕರೆ/ಗುಂಟೆಯಷ್ಟು ಜಮೀನು ಖುಲ್ಲಾ ಇರುವುದಾಗಿ, ಸ.ನಂ.14ರ ಪಕ್ಕದಲ್ಲಿದ್ದು, ದೋಭಿಘಾಟ್ ನಿರ್ಮಿಸಲು ನೀರಿನ ಸೌಲಭ್ಯ ಇದ್ದು, ಈ ಪ್ರದೇಶ ಯೋಗ್ಯವಾಗಿರುವುದಾಗಿ, ಪ್ರಸ್ತಾಪಿತ ಸಂಘಕ್ಕೆ ಮಂಜೂರು ಮಾಡಲು ಗ್ರಾಮಸ್ಥರು ಒಪ್ಪಿರುತ್ತಾರೆಂದು, ತಹಶೀಲ್ದಾರ್‌ರವರು ಉಲ್ಲೆಖ (2)ರ ದಿನಾಂಕ: 04.02.2007ರ ಪತ್ರದೊಂದಿಗೆ ಕಡತ ತಯಾರಿಸಿ ವರದಿ ಮಾಡಿರುತ್ತಾರೆ. ತಹಶೀಲ್ದಾರ್‌ರವರ ದಿನಾಂಕ: 17.09.2007ರ ಪತ್ರದಲ್ಲಿನ ವರದಿಯಂತೆ ಈ ಪ್ರದೇಶವು ಕ್ವಾರಿಯಾಗಿದ್ದು, 10 ಅಡಿಗಳಲ್ಲಿ ನೀರು ತುಂಬಿಕೊಂಡಿದ್ದು, ಕ್ವಾರಿ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ.

ದಿನಾಂಕ:20.11.2007ರ ಈ ಪ್ರಾಧಿಕಾರದ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1–20 ಎಕರೆ/ಗುಂಟೆ ಖರಾಬ್ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ದೋಭಿಘಾಟ್ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 20(1)(ಸಿ) ರನ್ವಯ ಪ್ರಸ್ತಾಪಿತ ಜಮೀನಿಗೆ ಮಾರುಕಟ್ಟೆ ಬೆಲೆಯ ಅರ್ಧದಷ್ಟು ಬೆಲೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪಾವತಿಸಿಕೊಂಡು ಮೂರು ವರ್ಷದೊಳಗಾಗಿ ಅದನ್ನು ಸಂಪೂರ್ಣವಾಗಿ ಉಪಯೋಗಿಸತಕ್ಕದ್ದು, ಉಪಯೋಗಿಸದೇ ಇದ್ದಲ್ಲಿ ಸದರಿ ಜಮೀನು ಬೇಷರತ್ತಾಗಿ ಸರ್ಕಾರದ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ ಎಂಬ ಷರತ್ತಿಗೊಳಪಡಿಸಿ, ಮಂಜೂರು ಮಾಡಲು ಉಲ್ಲೇಖ (3)ರ ಸರ್ಕಾರದ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ.

ಈ ಪ್ರಾಧಿಕಾರದ ಉಲ್ಲೇಖ (4) ದಿನಾಂಕ:15.02.2008 ರ ತಿಳುವಳಿಕೆ ಪತ್ರದಲ್ಲಿ ನೆಲ ಕಿಮ್ಮತ್ತು ಮತ್ತು ಪೋಡಿ ಶುಲ್ಕ ಸೇರಿ ರೂ.26,25,055–00ಗಳನ್ನು ಸರ್ಕಾರಕ್ಕೆ ಸಂದಾಯ ಮಾಡಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಲಾಗಿತ್ತು. ಅದರಂತೆ ಚಲನ್ ಸಂಖ್ಯೆ:104 ದಿನಾಂಕ:21.03.2009 ರಂದು ಸರ್ಕಾರಕ್ಕೆ ಹಣ ಸಂದಾಯ ಮಾಡಿ ಮೂಲ ಚಲನ್‌ನನ್ನು ಹಾಜರುಪಡಿಸಿರುತ್ತಾರೆ. ಅಂತೆಯೇ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ನಂ: ಎಲ್ಎನ್‌ಡಿ(ಪೂ)ಸಿಆರ್: 47/07–08, 21/07–08, ದಿನಾಂಕ: 13ನೇ ಮೇ 2009

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಬಸವನಪುರ ಗ್ರಾಮದ ಸ.ನಂ.26 ರಲ್ಲಿನ 1–20 ಎಕರೆ/ಗುಂಟೆ ಆಕಾರಕಂಡ ಬಂಜರು ಎಂಬುದಾಗಿ ವರ್ಗೀಕೃತವಾದ ಜಮೀನನ್ನು ಶ್ರೀ ಮಾಚಿ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ(ರಿ)ರವರಿಗೆ ಕುಲ ಕಸಬು ನಡೆಸಲು ದೋಭಿಘಾಟ್ ನಿರ್ಮಾಣಕ್ಕಾಗಿ ಉಲ್ಲೇಖ(5)ರ ಸರ್ಕಾರದ ಪತ್ರದಲ್ಲಿನ ಅನುಮೋದನೆಯಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು 1969ರ ನಿಯಮ 20(1)(ಸಿ) ರನ್ವಯ ನಿಗದಿತ ಮೊತ್ತವನ್ನು ಬಿ.ಬಿ.ಎಂ.ಪಿ. ಯಿಂದ ಸರ್ಕಾರಕ್ಕೆ ಪಾವತಿಸಿಕೊಂಡಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕೆಳಕಂಡ ಷರತ್ತಿಗೊಳಪಡಿಸಿ ಮಂಜೂರು ಮಾಡಲಾಗಿದೆ.

ಪ್ರಸ್ತಾಪಿತ ಜಮೀನನ್ನು ಸ್ವಾಧೀನಪಡೆದುಕೊಂಡ ನಂತರ 3 ವರ್ಷದೊಳಗಾಗಿ ನಿಗದಿತ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು. ಉಪಯೋಗಿಸದೇ ಇದ್ದಲ್ಲಿ ಸದರಿ ಜಮಿನು ಬೇಷರತ್ತಾಗಿ ಸರ್ಕಾರದ ಕಂದಾಯ ಇಲಾಖೆಯಲ್ಲಿ ನಿಹಿತವಾಗುತ್ತದೆ.

ಹೆಚ್. ರಾಮಾಂಜನೇಯ

ಪಿ.ಆರ್. 334 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಹಗದೂರು ಗ್ರಾಮದ ಸ.ನಂ.127 ರಲ್ಲಿ 2–25 ಎಕರೆ/ಗುಂಟೆ ಮತ್ತು ಸ.ನಂ. 132 ರಲ್ಲಿ 2–10 ಎಕರೆ/ಗುಂಟೆ ಒಟ್ಟು 4–35 ಎಕರೆ/ಗುಂಟೆ ಇಮ್ಮಡಿಹಳ್ಳಿ ಸರ್ಕಾರಿ ಪ್ರೌಢಶಾಲೆ ಹೆಸರಿನಲ್ಲಿರುವ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ: 1. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ:ಎಲ್ಎನ್ಡಿ:ಸಿಆರ್:93/09–10, ದಿನಾಂಕ:12.6.2009.

2. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ:70:ಎಲ್ಜಿಪಿ/2008, ದಿನಾಂಕ:8.8.2008.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹಗದೂರು ಗ್ರಾಮದ ಸ.ನಂ. 127 ರಲ್ಲಿ 2–25 ಎಕರೆ/ಗುಂಟೆ ಜಮೀನು ಇಮ್ಮಡಿಹಳ್ಳಿ ಪ್ರೌಢಶಾಲೆಯ ಹೆಸರಿನಲ್ಲಿದ್ದು, ನಂ.ಎಂ.ಆರ್.9/96–97 ರಂತೆ ಖಾತೆಯಾಗಿರುತ್ತದೆ. ಸ.ನಂ. 132 ರಲ್ಲಿ 2–10 ಎಕರೆ/ಗುಂಟೆ ಇಮ್ಮಡಿಹಳ್ಳಿ – ಹಗದೂರು ಪ್ರೌಢಶಾಲೆ ಮತ್ತು ಆಟದ ಮೈದಾನದ ಹೆಸರಿನಲ್ಲಿದ್ದು, ನಂ.ಎಂ.ಆರ್.2/99–2000 ರಂತೆ ಖಾತೆಯಾಗಿರುತ್ತದೆ. ಅಲ್ಲದೇ ಸರ್ವೆ ನಂ. 133 ರಲ್ಲಿ 0–04 ಗುಂಟೆ ಖರಾಬ್ ಜಾತಾ 4–01 ಎಕರೆ/ಗುಂಟೆ ಇಮ್ಮಡಿಹಳ್ಳಿ – ಹಗದೂರು ಪ್ರೌಢಶಾಲೆ ಕಟ್ಟಡ ಮತ್ತು ಆಟದ ಮೈದಾನದ ಹೆಸರಿನಲ್ಲಿರುತ್ತದೆ. ನಂ.ಎಂ.ಆರ್.18/03–04 ರಂತೆ ಖಾತೆಯಾಗಿರುತ್ತದೆ. ಮಾನ್ಯ ಉನ್ನತ ಶಿಕ್ಷಣ ಸಚಿವರ ದಿನಾಂಕ: 28.05.2009ರ ಟಿಪ್ಪಣಿಯಲ್ಲಿ ಇಮ್ಮಡಿಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಸರಿನಲ್ಲಿರುವ ಸುಮಾರು 10–00 ಎಕರೆ ಜಮೀನಿನ ಪೈಕಿ 5–00 ಎಕರೆ ಜಮೀನನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಹೊಸದಾಗಿ ಪ್ರಾರಂಭಿಸಲಾಗಿರುವ ಸರ್ಕಾರಿ ಪಾಲಿಟೆಕ್ನಿಕ್‌ಗೆ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಸದರಿ ಟಿಪ್ಪಣಿಯನ್ನು ಪರಿಗಣಿಸಿ, ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2–10 ಎಕರೆ/ಗುಂಟೆ ಮತ್ತು ಸರ್ವೆ ನಂ. 127 ರಲ್ಲಿ 2–25 ಎಕರೆ/ಗುಂಟೆ ಒಟ್ಟು 4–35 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್‌ಗೆ ಮಂಜೂರು ಮಾಡಲು ಉಲ್ಲೇಖ (1)ರ ಪತ್ರದಲ್ಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರು ಕಡತ ತಯಾರಿಸಿ ವರದಿ ಮಾಡಿರುತ್ತಾರೆ. ಆದ್ದರಿಂದ ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2–10 ಎಕರೆ/ಗುಂಟೆ ಮತ್ತು ಸರ್ವೆ ನಂ.127 ರಲ್ಲಿ 2–25 ಎಕರೆ/ಗುಂಟೆ ಒಟ್ಟು 4–35 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪಾಲಿಟೆಕ್ನಿಕ್‌ಗೆ ಕಾಯ್ದಿರಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂ. ಎಲ್ಎನ್ಡಿ(ಪೂ)ಸಿಆರ್:32/09–10, ದಿನಾಂಕ: 22ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ರವರು ವರದಿಯಲ್ಲಿನ ಅಂಶಗಳನ್ನು ಪರಿಗಣಿಸಿ, ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಂತೆ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಹಗದೂರು ಗ್ರಾಮದ ಸರ್ವೆ ನಂ. 132 ರಲ್ಲಿ 2–10 ಎಕರೆ/ಗುಂಟೆ ಮತ್ತು ಸರ್ವೆ ನಂ.127 ರಲ್ಲಿ 2–25 ಎಕರೆ/ಗುಂಟೆ ಒಟ್ಟು 4–35 ಎಕರೆ/ಗುಂಟೆ ಇಮ್ಮಡಿಹಳ್ಳಿ ಪ್ರೌಢಶಾಲೆ ಮತ್ತು ಆಟದ ಮೈದಾನದ ಹೆಸರಿನಲ್ಲಿರುವ ಜಮೀನನ್ನು ಇಮ್ಮಡಿಹಳ್ಳಿ– ಹಗದೂರು ಮತ್ತು ಸುತ್ತುಮುತ್ತಲಿನ ಗ್ರಾಮಗಳ ಅನುಕೂಲಕ್ಕಾಗಿ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಕಾಯ್ದಿರಿಸಿ ಆದೇಶಿಸಿದೆ.

ಹೆಚ್. ರಾಮಾಂಜನೇಯ

ಪಿ.ಆರ್. 335 ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ ಪತ್ರ

ನಂ: ಎಲ್.ಆರ್.ಎಫ್ (109)(ಪೂ)ಸಿ.ಆರ್:1/09–10, ದಿನಾಂಕ: 17ನೇ ಜುಲೈ 2009

ವಿಷಯ: ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–34 ರವರು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಖರೀದಿಸಲು ಅನುಮತಿ ಕೋರಿರುವ ಬಗ್ಗೆ.

ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–34 ರವರು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 109 ರಡಿ ಖರೀದಿಸಲು ಮಾಡಿರುವ ಬೇಡಿಕೆ ಹಾಗೂ ನಮೂನೆ–15 ಎ ಮತ್ತು ನಮೂನೆ–15ಎಎ ರಲ್ಲಿ ನೀಡಿದ ಮಾಹಿತಿ ಅನುಸರಿಸಿ ತಹಶೀಲ್ದಾರ್,

ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್.ಆರ್.ಎಫ್/ಸಿ.ಆರ್/9/09–10, ದಿನಾಂಕ: 1.7.2009 ರಲ್ಲಿ ಪ್ರಸ್ತಾವಿತ ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಖರೀದಿಸಲು ಸದರಿ ಸಂಸ್ಥೆಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109 (1)(II) ರಡಿ ಅನುಮತಿ ನೀಡಲು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸಂಸ್ಥೆಯು ನೋಂದಣಿ ಸಂಖ್ಯೆ 715/05–06, ದಿನಾಂಕ: 7.11.2005 ರಲ್ಲಿ ನೊಂದಾಯಿಸಲ್ಪಟ್ಟಿದೆ. ಖಾತೆದಾರರಿಂದ ಜಮೀನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಪ್ರಸ್ತಾವಿತ ಜಮೀನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಕಾಯ್ದೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ರ ಕಲಂ 109ರ ಪ್ರಕಾರ ಶೈಕ್ಷಣಿಕ ಉದ್ದೇಶಕ್ಕೆ 4 ಯುನಿಟ್ ಗಳವರೆಗೆ ಜಮೀನು ಹೊಂದಲು ಅವಕಾಶ ಕಲ್ಪಿಸಿದೆ. ಈ ಪ್ರಸ್ತಾವನೆ ಕರ್ನಾಟಕ ತಿದ್ದುಪಡಿ ಕಾಯ್ದೆ 1995 ರ ಪ್ರಕಾರ ಕಲಂ 109 (1) (11) ಮತ್ತು ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ಕಾಯಿದೆ 1961 ಕಲಂ 63, 79ಎ, 79ಬಿ ಅಥವಾ 80ಕ್ಕೆ ವಿನಾಯ್ತಿ ನೀಡಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಕೊಡತಿ ಗ್ರಾಮದ ಸ.ನಂ. 56/1ಬಿ ರಲ್ಲಿ 2–21 ಎಕರೆ:ಗುಂಟೆ ಜಮೀನನ್ನು ಶ್ರೀರಾಮ್ ಎಜುಕೇಷನಲ್ ಟ್ರಸ್ಟ್, ನಂ.173, 9ನೇ ಮೈನ್, 7ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು–34 ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಕಲಂ 109 (1) (11) ರಡಿ ಹಾಗೂ ಸರ್ಕಾರದ ತಿದ್ದುಪಡಿ ಅಧಿಸೂಚನೆ ನಂ: ಕಂಇ 47 ಶಾಸನ 2001 ಬೆಂಗಳೂರು ದಿನಾಂಕ: 23.04.2003 ರಂತೆ ಶೈಕ್ಷಣಿಕ ಉದ್ದೇಶಕ್ಕೆ 2 ಯುನಿಟ್‌ಗಳಿದ್ದು, ಜಮೀನನ್ನು ಹೊಂದಲು ಅವಕಾಶ ಕಲ್ಪಿಸಿದೆ. ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಿದೆ.

ಷರತ್ತುಗಳು

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸಿಕೊಳ್ಳತಕ್ಕದ್ದು ಮತ್ತು ಈ ಬಗ್ಗೆ ತಹಸೀಲ್ದಾರ್‌ರವರ ಮೂಲಕ ಈ ಕಛೇರಿಗೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ ಬ್ಯಾಂಕ್ ಅಥವಾ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯಿದೆ 1995 ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 55 ಪೇಯಿಡ್ ಅಪ್ ಷೇರು ಬಂಡವಾಳ ಹೊಂದಿರುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸಂಘ ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಸದರಿ ಜಮೀನು ಸಿ.ಡಿ.ಪಿ ಪ್ರಕಾರ ಕೃಷಿ ವಲಯದಲ್ಲಿ ಬರುತ್ತಿದ್ದು, ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳತಕ್ಕದ್ದು. ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅನುಮತಿ ಪಡೆಯದೆ ಹಾಗೂ ಅನ್ಯಕ್ರಾಂತ ಪಡಿಸದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
4. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಭೂ ಕಂದಾಯ ಕಾಯಿದೆ 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಬೇಕು. ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಷರತ್ತಿಗೆ ಒಳಪಡಿಸಿದೆ.
5. ಈ ಜಮೀನು ನಗರಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಂದ ಸಿ.ಡಿ.ಪಿ, ಒ.ಡಿ.ಪಿ ಮತ್ತು ಹಸಿರು ವಲಯ ವ್ಯಾಪ್ತಿಯೊಳಗೆ ಬಂದರೆ ಅದರಂತೆ ಅನುಮತಿ ಪಡೆದು ಉಪಯೋಗಿಸಿಕೊಳ್ಳತಕ್ಕದ್ದು.
6. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾದ ಅನುಮತಿಯನ್ನು ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣ ಮುಕ್ತವಾಗಿಸಿ ಸರ್ಕಾರದಲ್ಲಿ ನಿಹಿತ ಮಾಡಲಾಗುವುದು.
7. ಈ ಅನುಮತಿ ಭೂ ಸುಧಾರಣೆ ಕಾಯಿದೆ 1961 ರ ಕಲಂ 109 ರನ್ವಯ ಮಾತ್ರ ಮಾಡಿರುತ್ತದೆ. ಬೇರೆ ಕಾನೂನುಗಳಿಗೆ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
8. ಶ್ರೀರಾಮ ಎಜುಕೇಷನ್ ಟ್ರಸ್ಟ್ (ರಿ) ರವರು 3 ತಿಂಗಳ ಒಳಗಾಗಿ ಸಂಬಂಧಪಟ್ಟ ಇಲಾಖೆಯಿಂದ ಶೈಕ್ಷಣಿಕ/ಶಾಲೆಗಳನ್ನು ನಡೆಸುವ ಬಗ್ಗೆ ಅನುಮತಿ ಪತ್ರ ಪಡೆದು ಈ ಕಛೇರಿಗೆ ಹಾಜರುಪಡಿಸದೇ ಇದ್ದರೆ ಈ ಅನುಮತಿ ಪತ್ರ ಯಾವುದೇ ಸೂಚನೆ ನೀಡದೆ ತನ್ನಿಂದ ತಾನೆ ರದ್ದಾಗುತ್ತದೆ ಎಂಬ ಷರತ್ತಿಗೊಳಪಟ್ಟಿರುತ್ತದೆ.
9. ಪ್ರಸ್ತುತ ಸಂಸ್ಥೆ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಟ್ಟು ಸೀಟುಗಳಲ್ಲಿ ಶೇಕಡ 10 ರಷ್ಟನ್ನು ನೀಡತಕ್ಕದ್ದು.

ವಿಶೇಷ ಜಿಲ್ಲಾಧಿಕಾರಿಗಳು (ಕಂ),
ಬೆಂಗಳೂರು ಜಿಲ್ಲೆ, ಬೆಂಗಳೂರು.

ಪಿ.ಆರ್. 336

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಭೂಸ್ವಾಧೀನ ಕಾಯ್ದೆ 1894 ರ ಕಲಂ 16(2) ರ ಮೇರೆಗೆ ಪ್ರಕಟಣೆ

ಕ್ರಮಾಂಕ: ಎಲ್.ಎ.ಕ್ಯೂ ಎಸ್.ಆರ್. 1/05-06, ದಿನಾಂಕ: 9ನೇ ಜುಲೈ 2009

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮ ಸಂಖ್ಯೆ17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ (1894 ರ ಸಾಲಿನ ಕೇಂದ್ರ ಅಧಿನಿಯಮ 1 ರ) ಪ್ರಕರಣ 16(2) ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಸಾಗರ ತಾಲ್ಲೂಕು ಗಿಳಲಗುಂಡಿ-ಕೊಲ್ಲಿಬಚ್ಚಲು ಹಳ್ಳಕ್ಕೆ ಹೊಸಕೆರೆ ನಿರ್ಮಾಣಕ್ಕೆ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕರಣ 16(1) ರಂತೆ ವಶಪಡಿಸಿಕೊಳ್ಳಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ　　**ಹೋಬಳಿ:** ಕುಂಸಿ

ತಾಲ್ಲೂಕು: ಶಿವಮೊಗ್ಗ　　**ಗ್ರಾಮ:** ಕುಣೆಹೊಸೂರು

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
38	ಖುಷ್ಕಿ	0-10	11.12.2006
41	ತರಿ	3-23	
42	ಖುಷ್ಕಿ	5-02	
43ಪಿ	ತರಿ	5-27	
44	ತರಿ	1-20	
45ಪಿ	ತರಿ	1-00	
46	ಖುಷ್ಕಿ	0-28	
ಒಟ್ಟು		**17-30**	

ಪಿ.ಆರ್. 337　　ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ಭೂಸ್ವಾಧೀನ ಕಾಯ್ದೆ 1894 ರ ಕಲಂ 16(2) ರ ಮೇರೆಗೆ ಪ್ರಕಟಣೆ

ಕ್ರಮಾಂಕ: ಎಲ್.ಎ.ಕ್ಯೂ ಎಸ್.ಆರ್. 1/06-07, ದಿನಾಂಕ: 9ನೇ ಜುಲೈ 2009

ಕರ್ನಾಟಕ ಸರ್ಕಾರದವರು 1961ನೇ ಸಾಲಿನ ಕರ್ನಾಟಕ ಅಧಿನಿಯಮ ಕ್ರಮ ಸಂಖ್ಯೆ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ (1894 ರ ಸಾಲಿನ ಕೇಂದ್ರ ಅಧಿನಿಯಮ 1 ರ) ಪ್ರಕರಣ 16(2) ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಪಶುವೈದ್ಯಕೀಯ ಮಹಾ ವಿದ್ಯಾಲಯಕ್ಕಾಗಿ ಅಧಿಕೃತವಾಗಿ ಸದರಿ ಭೂ ಸ್ವಾಧೀನ ಅಧಿನಿಯಮದ ಪ್ರಕರಣ 16(1) ರಂತೆ ವಶಪಡಿಸಿಕೊಳ್ಳಲಾಗಿದೆ.

ಅನುಸೂಚಿ

ಜಿಲ್ಲೆ: ಶಿವಮೊಗ್ಗ　　**ಹೋಬಳಿ:** ಕಸಬಾ

ತಾಲ್ಲೂಕು: ಶಿವಮೊಗ್ಗ　　**ಗ್ರಾಮ:** ಸೋಮಿನಕೊಪ್ಪ

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
23/1	ಸ.ನಿ.ತ	3-28	19.12.2008
23/2	ಸ.ನಿ.ತ	1-14	
23/2ಪಿ1	ಸ.ನಿ.ತ	0-12	
23/ಪಿ2	ಸ.ನಿ.ತ	1-02	
23/2	ಸ.ನಿ.ತ	1-02	
23/3ಪಿ2	ಸ.ನಿ.ತ	1-02	
23/3ಪಿ	ಸ.ನಿ.ತ	1-00	
23/ಪ3ಪಿ1	ಸ.ನಿ.ರ ಒಟ್ಟು	1-07 10-27	
18/1	ಸ.ನಿ.ತ	0-31	
22/ಪಿ1	ಸ.ನಿ.ತ	0-35	

ಸ. ನಂ.	ತರಹೆ	ವಿಸ್ತೀರ್ಣ	ಸ್ವಾಧೀನಕ್ಕೆ ಪಡೆದ ದಿನಾಂಕ
22/2	ಸ.ನಿ.ತ	0–01	
22/3	ಸ.ನಿ.ತ	0–07	
22/4	ಸ.ನಿ.ತ	0–10	
22/5ಪಿ	ಸ.ನಿ.ತ	0–17.12	
22/5ಪಿ	ಸ.ನಿ.ತ	0–01–02	
22/5ಪಿ	ಸ.ನಿ.ತ	0–01–02	
22/6ಪಿ	ಸ.ನಿ.ತ	0–20	
22/7	ಸ.ನಿ.ತ	0–04	
22/8ಪಿ	ಸ.ನಿ.ತ	0–33	
22/8	ಸ.ನಿ.ತ	0–30	
ಜುಮ್ಲಾ		**4–31**	
36/63	ಖುಷ್ಕಿ	4–00	
36/11	ಖುಷ್ಕಿ	2–00	
36/57	ಖುಷ್ಕಿ	2–00	
36/ಪಿ6	ಖುಷ್ಕಿ	2–00	
36/6	ಖುಷ್ಕಿ	2–00	
36/16	ಖುಷ್ಕಿ	2–00	
36/ಪಿ14	ಖುಷ್ಕಿ	2–00	
36/48	ಖುಷ್ಕಿ	2–00	
36/4	ಖುಷ್ಕಿ	2–00	
36/35ಪಿ	ಖುಷ್ಕಿ	2–00	
36/ಪಿ12	ಖುಷ್ಕಿ	2–00	
ಜುಮ್ಲಾ		**24–00**	

ಪಿ.ಆರ್. 338 ಉಪ ವಿಭಾಗಾಧಿಕಾರಿ, ಶಿವಮೊಗ್ಗ ಉಪ ವಿಭಾಗ, ಶಿವಮೊಗ್ಗ

ತಹಶೀಲ್ದಾರ್‌ರವರ ಕಾರ್ಯಾಲಯ ಶಿಕಾರಿಪುರ

ನಮೂನೆ–27

38ನೇ ನಿಯಮ 68(1)ರ ಪ್ರಕರಣದ ಮೇರೆಗೆ ಘೋಷಣೆ

ನಂ: ಎಲ್‌ಎನ್‌ಡಿ : ಸಿಆರ್ : 85:08–09, ಶಿಕಾರಿಪುರ, ದಿನಾಂಕ: 21ನೇ ಜುಲೈ 2009

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರ್ಕಾರಿ ಹೊಂಡದ ಭಾಗವು ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲ ಎಂದು ರಾಜಸ್ವ ಸರ್ಕಾರಕ್ಕೆ ಕಂಡು ಬಂದಿರುವುದರಿಂದ ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸರ್ಕಾರಿ ಹೊಂಡ ಭಾಗವು ಸಾರ್ವಜನಿಕ ಉಪಯೋಗಕ್ಕೆ ಅಗತ್ಯ ಇಲ್ಲವೆಂದು ಮತ್ತು ಹೊಂಡ ಭಾಗದಲ್ಲಿ ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸಿರುತ್ತದೆ.

ಸದರಿ ಹೊಂಡದ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳವರು ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವ ಇರುವ ಇತರೆ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಸಾರ್ವಜನಿಕರು ಅಥವಾ ಯಾವುದೇ ವ್ಯಕ್ತಿಯು ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಬಂಧಿಸಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಮತ್ತು ಹಕ್ಕಿನ ಬಗ್ಗೆ ಸ್ಪಷ್ಟ ಪರಿಹಾರಕ್ಕಾಗಿ ಕ್ಲೇಮ್ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ಗೆ ಬರಹದಲ್ಲಿ ತಿಳಿಸತಕ್ಕದ್ದು, ಮತ್ತು ಸದರಿ

ಆಕ್ಷೇಪಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣದಲ್ಲಿ ಉಪ–ಸಂಬಂಧಿಸಿರುವಂತೆ ಡೆಪ್ಯೂಟಿ ಕಮೀಷನರ್ ಪರಿಶೀಲಿಸತಕ್ಕದ್ದು.

ಅನುಸೂಚಿ

ಸರ್ಕಾರಿ ಹೊಂಡದ ಭಾಗ ಬರುವ ಗ್ರಾಮಗಳು	ಹಳಿಯೂರು
ತಾಲ್ಲೂಕು	ಶಿಕಾರಿಪುರ
ಜಿಲ್ಲೆ	ಶಿವಮೊಗ್ಗ
ಹೊಂಡದ ಭಾಗ ಅಥವಾ ಭಾಗಗಳು	ಸರ್ಕಾರಿ ಹಾರನಹೊಂಡ
ಥಂಜನ್ ರಸ್ತೆ, ಭಾಗಗಳ ಸರಿಸುಮಾರು ವಿಸ್ತೀರ್ಣ	ಹಳಿಯಾರು ಸ.ನಂ:
ಚಕ್ಕುಬಂದಿ:ಸ.ನಂ: 210ಕ್ಕೆ	1) ಪೂರ್ವಕ್ಕೆ: ರಸ್ತೆ 210ರಲ್ಲಿ 7–07 ಎಕರೆ 2) ಪಶ್ಚಿಮಕ್ಕೆ: ಸನಂ: ಕಂಬಳಿ ಹೊಂಡ 240 3) ಉತ್ತರಕ್ಕೆ: ಸ.ನಂ:244 ಹಳಿಯೂರು ಸನಂ:215 6–03 ಗುಂಟೆ 4) ದಕ್ಷಿಣಕ್ಕೆ: ಇದೇ ಸನಂ:ಉಳಿದ ಭಾಗ, ಹಾರನಹೊಂಡ
3) ಉತ್ತರಕ್ಕೆ : ಸನಂ:214	ಸನಂ:215ಕ್ಕೆ 1) ಪೂರ್ವಕ್ಕೆ ಇದೇ ಸನಂ: 2) ಪಶ್ಚಿಮಕ್ಕೆ ಸನಂ:236
4) ದಕ್ಷಿಣಕ್ಕೆ ಇದೇ ಸನಂ: ಉಳಿದ ಭಾಗ.	

ಪಿ.ಆರ್. 339 ತಹಸೀಲ್ದಾರ್, ಶಿಕಾರಿಪುರ ತಾಲ್ಲೂಕು.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್.ಎನ್.ಡಿ/ಸಿ.ಆರ್/503/08–09, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಅಡಿಗಾರ ಕಲ್ಲಹಳ್ಳಿ ಗ್ರಾಮದ ಸ.ನಂ. 71 ವಿಸ್ತೀರ್ಣ 2–10 ಎ/ಗುಂ ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.71 ಜಮೀನಿನಲ್ಲಿ 2–10 ಎ/ಗುಂ. ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನದ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ತೋಪು ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ತೋಪು ಜಮೀನಿನ 2–10 ಎ/ಗುಂ ಜಮೀನನ್ನು ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗೆ ಮತ್ತು ಶಾಲೆಯ ಆಟದ ಮೈದಾನಕ್ಕೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಅಡಿಗಾರ ಕಲ್ಲಹಳ್ಳಿ
ಸ.ನಂ.– 71	ವಿಸ್ತೀರ್ಣ : 2–10	ವರ್ಗೀಕರಣ : ಸರ್ಕಾರಿ ತೋಪು

ಪೂರ್ವಕ್ಕೆ: ಸ.ನಂ.– 83,70 ಪಶ್ಚಿಮಕ್ಕೆ: ಸ.ನಂ.–74,72,65

ಉತ್ತರಕ್ಕೆ: ಸ.ನಂ.– 76 ದಕ್ಷಿಣಕ್ಕೆ: ಸ.ನಂ.–65

ತಹಶೀಲ್ದಾರ್,

ಪಿ.ಆರ್. 340 ಆನೇಕಲ್ ತಾಲ್ಲೂಕು, ಆನೇಕಲ್.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/60/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಚಂಬೇನಹಳ್ಳಿ ಗ್ರಾಮದ ಸ.ನಂ. 71 ವಿಸ್ತೀರ್ಣ 0–39 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.71 ಜಮೀನಿನಲ್ಲಿ 0–39 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–39 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಚಂಬೇನಹಳ್ಳಿ
ಸ.ನಂ.– 71	ವಿಸ್ತೀರ್ಣ : 0–39	ವರ್ಗೀಕರಣ : ಸರ್ಕಾರಿ ಗುಂಡು ತೋಪು
ಪೂರ್ವಕ್ಕೆ: ಸ.ನಂ.– 69		ಪಶ್ಚಿಮಕ್ಕೆ: ಸ.ನಂ.–72
ಉತ್ತರಕ್ಕೆ: ಸ.ನಂ.– 70		ದಕ್ಷಿಣಕ್ಕೆ: – ಓಣಿ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 347

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/61/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಯಮರೆ ಗ್ರಾಮದ ಸ.ನಂ. 44 ವಿಸ್ತೀರ್ಣ 0–10 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.44 ಜಮೀನಿನಲ್ಲಿ 0–10 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ

ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–10 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಯಮರೆ

ಸ.ನಂ.– 44 ವಿಸ್ತೀರ್ಣ : 0–10 ವರ್ಗೀಕರಣ : ಸರ್ಕಾರಿ ತೋಪು

ಪೂರ್ವಕ್ಕೆ: ಸ.ನಂ.– 45 ಪಶ್ಚಿಮಕ್ಕೆ:– ರಸ್ತೆ

ಉತ್ತರಕ್ಕೆ: ಸ.ನಂ.– 43 ದಕ್ಷಿಣಕ್ಕೆ: ಸ.ನಂ.–45

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 348

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/62/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಕಾಡಅಗ್ರಹಾರ ಗ್ರಾಮದ ಸ.ನಂ. 10 ವಿಸ್ತೀರ್ಣ 0–25 ಎ/ಗುಂ ಜಮೀನನ್ನು ಆಶ್ರಯ ಯೋಜನೆಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.10 ಜಮೀನಿನಲ್ಲಿ 0–25 ಎ/ಗುಂ. ಜಮೀನನ್ನು ಆಶ್ರಯ ಯೋಜನೆ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಆಶ್ರಯ ಯೋಜನೆ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–25 ಎ/ಗುಂ ಜಮೀನನ್ನು ಆಶ್ರಯ ಯೋಜನೆಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಕಾಡಅಗ್ರಹಾರ

ಸ.ನಂ.– 10 ವಿಸ್ತೀರ್ಣ : 0–25 ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– 11 ಮತ್ತು ಓಣಿ ಪಶ್ಚಿಮಕ್ಕೆ:– ಸೋಂಪುರ ಗ್ರಾಮದ ಗಡಿ ಮತ್ತು ಓಣಿ

ಉತ್ತರಕ್ಕೆ: ಸೋಂಪುರ ಗ್ರಾಮದ ಗಡಿ ಮತ್ತು ಓಣಿ ದಕ್ಷಿಣಕ್ಕೆ: ಸ.ನಂ.–11 ಮತ್ತು ಓಣಿ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 349

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/63/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಸೋಂಪುರ ಗ್ರಾಮದ ಸ.ನಂ. 68 ವಿಸ್ತೀರ್ಣ 0–24 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ

ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.68 ಜಮೀನಿನಲ್ಲಿ 0–24 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–24 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಸೋಂಪುರ

ಸ.ನಂ.– 68 ವಿಸ್ತೀರ್ಣ : 0–24 ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– 64,65 ಪಶ್ಚಿಮಕ್ಕೆ: ಸ.ನಂ.–69,70

ಉತ್ತರಕ್ಕೆ:– ಓಣಿ ದಕ್ಷಿಣಕ್ಕೆ: ಸ.ನಂ.–67

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 350

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/64/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಮಹಲ್ ಚೌಡದೇನಹಳ್ಳಿ ಗ್ರಾಮದ ಸ.ನಂ.76 ವಿಸ್ತೀರ್ಣ 0–33 ಎ/ಗುಂ ಜಮೀನನ್ನು ಸರ್ಕಾರಿ ಪಾಠ ಶಾಲೆಯ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.76 ಜಮೀನಿನಲ್ಲಿ 0–33 ಎ/ಗುಂ. ಜಮೀನನ್ನು ಸರ್ಕಾರಿ ಪಾಠ ಶಾಲೆಗೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸರ್ಕಾರಿ ಪಾಠ ಶಾಲೆಗೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 0–33 ಎ/ಗುಂ ಜಮೀನನ್ನು ಸರ್ಕಾರಿ ಪಾಠ ಶಾಲೆಗಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಮಹಲ್ ಚೌಡದೇನಹಳ್ಳಿ
ಸ.ನಂ.– 76 ವಿಸ್ತೀರ್ಣ : 0–33 ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ:– ಸರ್ಕಾರಿ ಕೆರೆ ಸ.ನಂ. 75 ಪಶ್ಚಿಮಕ್ಕೆ: ಸ.ನಂ.–77
ಉತ್ತರಕ್ಕೆ:– ಸರ್ಕಾರಿ ಕೆರೆ ಮತ್ತು ರಸ್ತೆ ದಕ್ಷಿಣಕ್ಕೆ: ಸರ್ಕಾರಿ ಕೆರೆ

ತಹಶೀಲ್ದಾರ್,
ಪಿ.ಆರ್. 352 ಆನೇಕಲ್ ತಾಲ್ಲೂಕು, ಆನೇಕಲ್.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/65/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಖರಾಬು ಜಮೀನಾಗಿರುತ್ತದೆ. ಅದರಂತೆ ಭುಜಂಗದಾಸನಕೆರೆ ಗ್ರಾಮದ ಸ.ನಂ. 2 ವಿಸ್ತೀರ್ಣ 0–08 ಎ/ಗುಂ ಜಮೀನನ್ನು ಸಾರ್ವಜನಿಕ ಹರಾಜಿಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.2 ಜಮೀನಿನಲ್ಲಿ 0–08 ಎ/ಗುಂ. ಜಮೀನನ್ನು ಸಾರ್ವಜನಿಕ ಹರಾಜಿನ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಹರಾಜಿನ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಖರಾಬು ಜಮೀನಿನ 0–08 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ಹರಾಜಿಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು : ಆನೇಕಲ್ ಗ್ರಾಮ : ಭುಜಂಗದಾಸನಕೆರೆ
ಸ.ನಂ.– 2 ವಿಸ್ತೀರ್ಣ : 0–08 ವರ್ಗೀಕರಣ : ಸರ್ಕಾರಿ ಖರಾಬು ಜಮೀನು

ಪೂರ್ವಕ್ಕೆ: ಸ.ನಂ.– 3,4 ಪಶ್ಚಿಮಕ್ಕೆ: ಸ.ನಂ.–4
ಉತ್ತರಕ್ಕೆ:– ಸ.ನಂ.– 4 ದಕ್ಷಿಣಕ್ಕೆ: ಸ.ನಂ.–1

ತಹಶೀಲ್ದಾರ್,
ಪಿ.ಆರ್. 353 ಆನೇಕಲ್ ತಾಲ್ಲೂಕು, ಆನೇಕಲ್.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/66/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಕಾಡಅಗ್ರಹಾರ ಗ್ರಾಮದ ಸ.ನಂ. 1 ವಿಸ್ತೀರ್ಣ 1–16 ಎ/ಗುಂ ಜಮೀನನ್ನು ಶಾಲಾ ಕಟ್ಟಡ, ಹಾಲಿನ ಡೈರಿ ಮತ್ತು ರಸ್ತೆಗೆ ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.1 ಜಮೀನಿನಲ್ಲಿ 1–16 ಎ/ಗುಂ. ಜಮೀನನ್ನು ಶಾಲಾ ಕಟ್ಟಡ ಹಾಲಿನ ಡೈರಿ ಮತ್ತು ರಸ್ತೆಗೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ

ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಶಾಲಾ ಕಟ್ಟಡ, ಹಾಲಿನ ಡೈರಿ ಮತ್ತು ರಸ್ತೆಗೆ ಉದ್ದೇಶಿಸಿದ್ದು ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆಕ್ಷೇಪಣೆಯನ್ನು ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 1–16 ಎ/ಗುಂ ಜಮೀನನ್ನು ಶಾಲಾ ಕಟ್ಟಡ ಹಾಲಿನ ಡೈರಿ ಮತ್ತು ರಸ್ತೆಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಕಾಡಅಗ್ರಹಾರ
ಸ.ನಂ.– 1	ವಿಸ್ತೀರ್ಣ : 1–16	ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ಸ.ನಂ.– ಪಶ್ಚಿಮಕ್ಕೆ: ಸ.ನಂ.–
ಉತ್ತರಕ್ಕೆ: ಸ.ನಂ.– ದಕ್ಷಿಣಕ್ಕೆ: ಸ.ನಂ.–

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 354

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್ ಎನ್ ಡಿ ಸಿ ಆರ್/67/09–10, ದಿನಾಂಕ: 25ನೇ ಮೇ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡು ತೋಪು ಜಮೀನಾಗಿರುತ್ತದೆ. ಅದರಂತೆ ಯಮರೆ ಗ್ರಾಮದ ಸ.ನಂ.4 ವಿಸ್ತೀರ್ಣ 1–28 ಎ/ಗುಂ ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.4 ಜಮೀನಿನಲ್ಲಿ 1–28 ಎ/ಗುಂ. ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡು ತೋಪು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡು ತೋಪು ಜಮೀನಿನ 1–28 ಎ/ಗುಂ ಜಮೀನನ್ನು ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು : ಆನೇಕಲ್	ಗ್ರಾಮ : ಯಮರೆ
ಸ.ನಂ.– 4	ವಿಸ್ತೀರ್ಣ : 1–28	ವರ್ಗೀಕರಣ : ಸರ್ಕಾರಿ ಗುಂಡು ತೋಪು

ಪೂರ್ವಕ್ಕೆ: ರಸ್ತೆ ಪಶ್ಚಿಮಕ್ಕೆ: ಹಳ್ಳ
ಉತ್ತರಕ್ಕೆ: ಸ.ನಂ.– 5 ದಕ್ಷಿಣಕ್ಕೆ: ಸ.ನಂ.–2

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 355

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ:158:ಎಲ್‌ಜಿಎ:2005, ಬೆಂಗಳೂರು, ದಿನಾಂಕ: 7ನೇ ಆಗಸ್ಟ್ 2009

ನಮೂನೆ–29

68ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗಿನ ಘೋಷಣೆ – ನಿಯಮ 96

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (5)ನೇ ಉಪ–ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ತಹಶೀಲ್ದಾರ್ ಬೆಳ್ತಂಗಡಿರವರು ಹೊರಡಿಸಿದ 28.1.2002ರ ದಿನಾಂಕದ ಪಿಆರ್ 185 ಪ್ರ 10ರ ಕ್ರಮ ಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲೆಗಳನ್ನು ಮತ್ತು ಜಿಲ್ಲೆಯ ಡೆಪ್ಯೂಟಿ ಕಮೀಷನರ್ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಅಂಥ ಭಾಗದಲ್ಲಿನ ಅಥವಾ ಅದರ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲಾ ಹಕ್ಕುಗಳು ಕೊನೆಗೊಳ್ಳತಕ್ಕುದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಭಾಗವು ಇರುವ ಗ್ರಾಮ	ಪಾರೆಂಕಿ
ತಾಲ್ಲೂಕು	ಬೆಳ್ತಂಗಡಿ
ಜಿಲ್ಲೆ	ದಕ್ಷಿಣ ಕನ್ನಡ
ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಭಾಗದ ವರ್ಣನೆ	ರಸ್ತೆ ಪೊರಂಬೋಕು, ಸರ್ಕಾರ
ರಸ್ತೆಯ / ಬೀದಿಯ / ಗಲ್ಲಿಯ / ದಾರಿಯ ಸರಿಸುಮಾರು ವಿಸ್ತೀರ್ಣ	ಸ.ನಂ.120–4ರಲ್ಲಿ 0.02 ಎಕರೆ
ಮೇರೆಗಳು	ಪೂರ್ವಕ್ಕೆ: 120–4ಪಿ1 ಪಶ್ಚಿಮಕ್ಕೆ: 120–4ಪಿ1 ಉತ್ತರಕ್ಕೆ: 120–3 ದಕ್ಷಿಣಕ್ಕೆ: 120–4ಪಿ1
ಸಾರ್ವಜನಿಕ ರಸ್ತೆ: ಬೀದಿ: ಗಲ್ಲಿ: ದಾರಿ ಅಥವಾ ಅದರ ಭಾಗ	ಮಂಗಳೂರು–ಚಾರ್ಮಾಡಿ ರಾಜ್ಯ ಹೆದ್ದಾರಿಯ ರಸ್ತೆ ಮಾರ್ಜಿನ್

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 372

ಇ. ಈಶ್ವರ ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ.ಮಂ).

ನಗರಸಭೆ ಕಾರ್ಯಾಲಯ – ತಿಪಟೂರು

ಅಧಿಸೂಚನೆ

ನ.ಸ.ತಿ:ಸಿಬ್ಬಂದಿ/ಪಿ.ಆರ್/ 07–08, ದಿನಾಂಕ: 25ನೇ ಜೂನ್ 2009

ಕೇಂದ್ರ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 5(1) ರನ್ವಯ ತಿಪಟೂರು ನಗರಸಭಾ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಾಧಿಕಾರಗಳನ್ನು ಪುನರ್ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಕ್ರ. ಸಂ.	ಅಧಿಕಾರಿಗಳ ಹೆಸರು & ಹುದ್ದೆ	ನಾಮನಿರ್ದೇಶನ ಹುದ್ದೆ	ಸಂಬಂಧಪಟ್ಟ ಶಾಖೆ
1.	ಶ್ರೀ ಕೆ.ಎಸ್. ವೆಂಕಟರಾಮ್, ಸಹಾಯಕ ಕಾರ್ಯಪಾಲಕ ಅಭಿಯಂತರರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಇಂಜಿನಿಯರಿಂಗ್/ಪರಿಸರ ಅಭಿಯಂತರರ ಶಾಖೆಯ/ ಎಸ್.ಜೆ.ಎಸ್.ಆರ್.ವೈ ಮತ್ತು ಕಟ್ಟಡ ಪರವಾನಿಗೆಗೆ ಒಳಪಡುವ ಮಾಹಿತಿಗಳನ್ನು ಒದಗಿಸುವುದು.
2.	ಶ್ರೀಮತಿ ಕೆ.ಹೆಚ್. ಪುಟ್ಟಲಕ್ಷ್ಮಮ್ಮ, ವ್ಯವಸ್ಥಾಪಕರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಆಡಳಿತ ಶಾಖೆಯ ಮಾಹಿತಿಗಳನ್ನು ಒದಗಿಸಲು ನಿಯೋಜಿಸಲಾಗಿದೆ.
3.	ಶ್ರೀ ಎಸ್.ಡಿ. ಬಸವೇಗೌಡ, ಲೆಕ್ಕಾಧೀಕ್ಷಕರು,	ಸಾರ್ವಜನಿಕ ಮಾಹಿತಿ ಅಧಿಕಾರಿ	ಲೆಕ್ಕಪತ್ರಕ್ಕೆ (ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸಲು ನಿಯೋಜಿಸಲಾಗಿದೆ).

ಪೌರಾಯುಕ್ತರು,

ಪಿ.ಡಿ. 19

ನಗರಸಭೆ, ತಿಪಟೂರು

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯ್ದೆ ಕಲಂ 6(1) ರ ಅನ್ವಯ ಘೋಷಣೆ

ಅಧಿಸೂಚನೆ ಸಂಖ್ಯೆ: ಕಂಇ 87 ಭೂ ಸ್ವಾ ಬೆ 2008, ದಿನಾಂಕ: 11ನೇ ಆಗಸ್ಟ್ 2009

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನುಗಳು ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ, ಚಿಕ್ಕಲ್ಲಸಂದ್ರ ಗ್ರಾಮದ ಆಸ್ತಿ ಸಂಖ್ಯೆ:278, 213, 260 ರ ಸ್ವತ್ತುಗಳನ್ನು ಭೂ ಸ್ವಾಧೀನಪಡಿಸಿಕೊಂಡು ರಸ್ತೆ ನಿರ್ಮಿಸುವ ಉದ್ದೇಶಕ್ಕಾಗಿ ಲೋಕೋಪಯೋಗಿ ಇಲಾಖೆಯವರ ಪರವಾಗಿ ಬೇಕಾಗಬಹುದೆಂದು ವಿಶೇಷ ಜಿಲ್ಲಾಧಿಕಾರಿಗಳವರ ಕ್ರಮಾಂಕ:ಎಲ್ಎಕ್ಯೂ:ಎಸ್ಆರ್:5:08–09, ದಿನಾಂಕ:03.12.2008ರ ಮೇರೆಗೆ ಕರ್ನಾಟಕ ರಾಜ್ಯ ಪತ್ರದ ದಿನಾಂಕ:08.01.2009, ಭಾಗ 6 ಪುಟ ಸಂಖ್ಯೆ:15, 16 ರಲ್ಲಿ ಪ್ರಕಟವಾಗಿರುವ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 5ಎ(2)ರ ಪ್ರಕರಣದ ಮತ್ತು 6(1) ಪ್ರಕರಣದ ಮೇರೆಗೆ ವಿಶೇಷ ಜಿಲ್ಲಾಧಿಕಾರಿಯವರು ಮೇಲೆ ಹೇಳಿದ ಉದ್ದೇಶಕ್ಕಾಗಿ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಭೂ ಸಂಗ್ರಹಣಾ ಅಧಿನಿಯಮದ ಮೇರೆಗೆ ಸದರಿ ಜಮೀನುಗಳು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಬಹುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗ್ರಹಣಾ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, 3ನೇ ಮಹಡಿ, ಪೋಡಿಯಂ ಬ್ಲಾಕ್, ಬೆಂಗಳೂರು–1 ಇವರನ್ನು ಸದರಿ ಜಮೀನುಗಳ ಬಗ್ಗೆ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಈ ಮೂಲಕ ನಿಯಮಿಸಲಾಗಿದೆ ಮತ್ತು ಸದರಿ ಜಮೀನಿನ ಅಧಿಕೃತ ಸಂಗ್ರಹಣಾ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನಿನ ನಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, ಪೋಡಿಯಂ ಬ್ಲಾಕ್, 3ನೇ ಮಹಡಿ, ಬೆಂಗಳೂರು–1 ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಬೆಂಗಳೂರು **ತಾಲ್ಲೂಕು:** ದಕ್ಷಿಣ **ಹೋಬಳಿ:** ಉತ್ತರಹಳ್ಳಿ **ಗ್ರಾಮ:** ಚಿಕ್ಕಲ್ಲಸಂದ್ರ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ: ಆಸ್ತಿ ಸಂಖ್ಯೆ	ತರಹೆ	ಚಕ್ಕುಬಂದಿ				ಭೂ ಸ್ವಾಧೀನಕ್ಕೆ ಬೇಕಾದ	
					ಪೂರ್ವ ಸ.ನಂ:	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ: ಚ.ಅಡಿ	ಆಕಾರ
1.	ನೀಲಮ್ಮ ಕೋಂ ಕೃಷ್ಣಮ್‌ನಾಯ್ಡು	–	278 213 260	–	ಉತ್ತರಹಳ್ಳಿ ರಸ್ತೆ	ತಾಯಪ್ಪನ ಜಮೀನು	ಮುನಿಯಪ್ಪನ ಜಮೀನು	ಇತರರ ಜಮೀನು	2745	10–00

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 376

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ–2)

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯ್ದೆ ಕಲಂ 6(1) ರ ಅನ್ವಯ ಘೋಷಣೆ

ಅಧಿಸೂಚನೆ ಸಂಖ್ಯೆ: ಕಂಇ 16 ಭೂಸ್ವಾಬೆ 2009, ದಿನಾಂಕ: 29ನೇ ಜುಲೈ 2009

ಈ ಮುಂದಿನ ಅನುಸೂಚಿಯಲ್ಲಿರುವ ಜಮಿೂನು ಒಂದು ಸಾರ್ವಜನಿಕ ಉದ್ದೇಶಕ್ಕೆ, ಅಂದರೆ ಜಮೀನನ್ನು ಬೆಂಗಳೂರು ಜಿಲ್ಲೆ, ಬೆಂಗಳೂರು ಉತರ್ತ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬ್ಯಾಟರಾಯನಪುರ ಗ್ರಾಮ ಸರ್ವೆ ನಂ:6:5 ರಲ್ಲಿ ಒಟ್ಟು 0–16 ಗುಂಟೆ ಜಮೀನನ್ನು ಹೂವು, ಹಣ್ಣು ಮತ್ತು ತರಕಾರಿ ಉಪ ಮಾರುಕಟ್ಟೆ ಪ್ರಾಂಗಣವನ್ನು ನಿರ್ಮಿಸಲು ಎ.ಪಿ.ಎಂ.ಸಿ., ಬೆಂಗಳೂರು, ಇವರ ಪರ ಅಗತ್ಯವಾಗಿ ಬೇಕಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು, ರವರ ಪತ್ರದ ಕ್ರಮಾಂಕ:ಎಲ್‌ಎಕ್ಯೂ:ಎಸ್‌ಆರ್:03:2008–09, ಎಲ್‌ಎಕ್ಯೂ:ಸಿಆರ್:86:2007–08, ದಿನಾಂಕ: 14.10.2008ರ ಮೇರೆಗೆ ಕರ್ನಾಟಕ ರಾಜ್ಯ ಪತ್ರದ ದಿನಾಂಕ:14.10.2008ರಂದು ಪ್ರಕಟಿಸಲಾಗಿರುವ ಕಾಯ್ದೆ ಕಲಂ 4(1)ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಸರ್ಕಾರದ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 5ಎ(2)ರ ಪ್ರಕರಣದ ಮತ್ತು 6(ಅ) ಪ್ರಕರಣದ ಮೇರೆಗೆ ವಿಶೇಷ ಜಿಲ್ಲಾಧಿಕಾರಿಯವರು ಮೇಲೆ ಹೇಳಿದ ಉದ್ದೇಶಕ್ಕಾಗಿ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಸದರಿ ಭೂ ಸಂಗ್ರಹಣಾ ಅಧಿನಿಯಮ 6ನೇ ಪ್ರಕರಣದ ಮೇರೆಗೆ ಸದರಿ ಜಮೀನು ಮೇಲಿನ ಉದ್ದೇಶಕ್ಕಾಗಿ ಅಗತ್ಯವಾಗಿ ಬೇಕಾಗಬಹುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂ ಸಂಗ್ರಹಣಾ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, 3ನೇ ಮಹಡಿ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು–1, ಇವರನ್ನು ಸದರಿ ಜಮೀನುಗಳ ಬಗ್ಗೆ ಮುಂದಿನ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಈ ಮೂಲಕ ನಿಯಮಿಸಲಾಗಿದೆ ಮತ್ತು ಸದರಿ ಜಮೀನಿನ ಅಧಿಕೃತ ಸಂಗ್ರಹಣಾ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನಿನ ನಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ವಿಶ್ವೇಶ್ವರಯ್ಯ ಕೇಂದ್ರ, ಪೋಡಿಯಂ ಬ್ಲಾಕ್, 3ನೇ ಮಹಡಿ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು–1 ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ಬೆಂಗಳೂರು **ತಾಲ್ಲೂಕು:** ಬೆಂಗಳೂರು ಉತ್ತರ (ಅಪರ) **ಹೋಬಳಿ:** ಯಲಹಂಕ **ಗ್ರಾಮ:** ಬ್ಯಾಟರಾಯನಪುರ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ: ಆಸ್ತಿ ಸಂಖ್ಯೆ	ತರಹೆ	ಚಕ್ಕುಬಂದಿ				ಭೂ ಸ್ವಾಧೀನಕ್ಕೆ ಬೇಕಾದ	
					ಪೂರ್ವ ಸ.ನಂ:	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.	ವಿಸ್ತೀರ್ಣ ಎ – ಗು	ಆಕಾರ ರೂ. ಪೈ
1.	ವಿ. ಸೆಲ್ವಂ ಬಿನ್ ವೆಂಕಟೇಶಯಾದವ್	ವಿ. ಕೃಷ್ಣಪ್ಪ	6:5	ಖುಷ್ಕಿ	14 ಎಪಿಎಂಸಿಗೆ ಭೂಸ್ವಾಧೀನ ವಾಗಿರುತ್ತದೆ	6:4 ಎಪಿಎಂಸಿಗೆ ಭೂ ಸ್ವಾಧೀನ ವಾಗಿರುತ್ತದೆ	6:4 ರ ಎಪಿಎಂಸಿಗೆ ಭೂಸ್ವಾಧೀನ ವಾಗಿರುತ್ತದೆ ಮತ್ತು ರಸ್ತೆಗೆ ದಾರಿ	5 ಖಾಸಗಿ ಜಮೀನು	0–16	0–64

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 379

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ–2)